ಮಸಣಮ್ಮನ ಮಾತು ಕೇಳುತ್ತಿದ್ದರೆ ಮಹಾರಾಜರು ಸೋಲಿಗರ ಕಷ್ಟ ಕಡಿಮೆ ಮಾಡಲು ಸಾಕಷ್ಟು ಪ್ರಯತ್ನ ಪಟ್ಟಿದ್ದು ತಿಳಿಯುತ್ತದೆ. ಮಸಣಮ್ಮನ ಪ್ರಕಾರ ಕಾಡಿನಲ್ಲಿ ಕಷ್ಟ ಪಡುತ್ತಿದ್ದ ಸೋಲಿಗರ ಪಾಡು ಕಂಡು ಮಹಾರಾಜರು ಮಮ್ಮಲ ಮರುಗುತ್ತಿದ್ದರು. "ಆ ನನ್ನ ದೊರೆ ನಮ್ಮ ಜನಗಳ ಕಷ್ಟ ಕಂಡು ಕಣ್ಣೀರು ಆಕುತ್ತಿದ್ದ" ಎಂದಳು. ಮಹಾರಾಜರ ಅನುಕಂಪವನ್ನು ಮಸಣಮ್ಮನ ಮುಗ್ಧ ಮನಸ್ಸು ವರ್ಣಿಸುವ ಬಗೆ ಇದು. ಮಹಾರಾಜರು ನಾವು ಊಹಿಸಬಹುದಾದಕ್ಕಿಂತ ಹೆಚ್ಚಾದ ಸಹಾಯವನ್ನು ಸೋಲಿಗರಿಗೆ ಮಾಡಿದ್ದಾರೆ ಎಂಬುದು ನಿಸ್ಸಂಶಯ. ಕಾಡಿನಲ್ಲಿ ವಿರಳವಾಗಿ ಅಲ್ಲಲ್ಲಿ ವಾಸಿಸುತ್ತಿದ್ದ ಸೋಲಿಗರನ್ನು ಗುಡಿಹಟ್ಟಿ ಸಮೀಪವೇ ಒಟ್ಟಾಗಿ ವಾಸಮಾಡಲು ಬೇಕಾದ ಅನುಕೂಲತೆಗಳನ್ನು ಮಾಡಿಸಿಕೊಟ್ಟಿದ್ದರು. "ಸರಕಾರ ಬರುವ ಮುನ್ನ ಮಾರಾಜರು ತಾನೆ ತಮ್ಮನ್ನೆಲ್ಲ ಒಂದು ಕಡೆ ಸೇರಿಸಿದ್ದು" ಎಂದು ಮಸಣಮ್ಮ ಮಹಾರಾಜರ ಸೋಲಿಗ ಕಲ್ಯಾಣ ಕಾರ್ಯವನ್ನು ಮುಕ್ತ ಕಂಠದಿಂದ ಹೊಗಳಿದಳು. ವರ್ಷಕ್ಕೊಮ್ಮೆ ಮಹಾರಾಜರು ಹೆಂಗಸರಿಗೆ ಸೀರೆ, ಗಂಡಸರಿಗೆ ಪಂಚೆ ನೀಡುತ್ತಿದ್ದರಂತೆ. ಆ ಕಾಲದಲ್ಲಿ ಸೋಲಿಗರಿಗೆ ಮೈಮುಚ್ಚುವಷ್ಟು ಬಟ್ಟೆ ಇರುತ್ತಿದ್ದುದೇ ಅಪರೂಪ. ರಾಜರ ಕೃಪೆಗೆ ಒಳಗಾಗಿದ್ದ ಬಂಗಲಿ ರಂಗೇಗೌಡ – ಮಸಣಮ್ಮ– ಇಂತಹ ಸೋಲಿಗರಿಗೆ ಸಾಕಷ್ಟು ಬಟ್ಟೆ ಅನ್ನ ಪಾನಾದಿಗಳು ಸಿಗುತ್ತಿತ್ತು. ಆದರೆ ಮಹಾರಾಜರನ್ನು ಕಂಡು ಹೆದರಿ ಓಡುವ ಸೋಲಿಗರಿಗೆ ಇಂತಹದ್ದೇನೂ ಸಿಗುತ್ತಿರಲಿಲ್ಲ. ಬಾಯಿಂದ ಬಾಯಿಗೆ ಸುದ್ದಿ ಹರಡಿ ಹೆದರುತ್ತಿದ್ದ ಸೋಲಿಗರೂ ನಿಧಾನವಾಗಿ ಬಂದು ವಸ್ತ್ರ ಮುಂತಾದವನ್ನು ಪಡೆದುಕೊಂಡು ಹೋಗುತ್ತಿದ್ದರು. ಮಹಾರಾಜರು ಕ್ಯಾಂಪಿಗೆ ಬಂದಾಗ ಗುಡಿಹಟ್ಟಿ ಸಮೀಪದ ಸೋಲಿಗರು ಮಕ್ಕಳು ಮರಿ ಸಮೇತ ಬಂಗಲಿ ಸಮೀಪ ಜಮಾಯಿಸುತ್ತಿದ್ದರು. ಆಗ ಮಹಾರಾಜರು ನೂರಾರು ಸೋಲಿಗರಿಗೆ ಹೊಟ್ಟೆ ಬಿರಿಯೆ ತಿಳಿಸಾರು – ಅನ್ನದ ಭೋಜನ ಏರ್ಪಡಿಸುತ್ತಿದ್ದರು. ರಂಗೇಗೌಡ ದೊಡ್ಡ ಹಂಡೆಯ ತುಂಬ ತಿಳಿಸಾರು ಮತ್ತು ಎಲ್ಲರಿಗೂ ಸಾಕಾಗುವಷ್ಟು ಅನ್ನ ಮಾಡುತ್ತಿದ್ದ. ಸಾಲಾಗಿ ಕುಳಿತ ಸೋಲಿಗರು ತೃಪ್ತಿಯಾಗುವವರೆಗೆ, ಎಂದರೆ ಸಾಮಾನ್ಯ ಊಹೆಗೆ ನಿಲುಕದಷ್ಟು ಪ್ರಮಾಣದ ಆಹಾರವನ್ನು ಸ್ವಾಹಾ ಮಾಡುತ್ತಿದ್ದರು. ಚಾಮರಾಜನಗರದ ಕೆಲವು ಹಳೆಯ ತಲೆಗಳಿಗೆ ಈ ಬೂರಿ ಭೋಜನದ ನೆನಪು ಇನ್ನೂ ಇದೆ. ಈ ನಾಡ ಜನ ಕಾಡ ಸೋಲಿಗರ ಊಟದ ವೈಖರಿಯನ್ನು ಅವಹೇಳನಕಾರಿಯಾಗಿ ವರ್ಣಿಸುವುದುಂಟು. ತಾನೊಬ್ಬ ನಯ – ನಾಜೂಕಿನ ಮನುಷ್ಯ ಎಂದು ಭಾವಿಸುವ ಆಸಾಮಿಯ ವರ್ಣನೆಯ ಪ್ರಕಾರ ಸೋಲಿಗರು ತಿಂದೂ ತಿಂದೂ ತಿಂದು ಎಷ್ಟು ತಿನ್ನುತ್ತಿದ್ದರೆಂದರೆ ಊಟ ಮುಗಿದ ನಂತರ ಪಂಕ್ತಿಯಿಂದ ಏಳಲಾರದೆ ಅಲ್ಲೇ ಕುಸಿದು ಬೀಳುತ್ತಿದ್ದರಂತೆ. ಇದು ಈ ನಾಜುಕಯ್ಯನ ಊಹೆಯೇ ಸರಿ. ಒಟ್ಟಿನಲ್ಲಿ ಈ ಎಲ್ಲವೂ ಬಂಗಲಿ ರಂಗೇಗೌಡರ ತಿಳಿ ಸಾರಿನ ಮಹಾತ್ಮೆಯನ್ನೂ ಸಾರುತ್ತದೆ.

ಬುಡದಿಂದ ಸುಮಾರು ಇಪ್ಪತ್ತೈದು ಕಿ.ಮೀ. ಬೆಟ್ಟ ಹತ್ತಿ ಮೇಲೆ ಬಂದರೆ ಕೆ. ಗುಡಿ ಫಾರೆಸ್ಟ್ ಪ್ರಾರಂಭವಾಗುತ್ತದೆ. ಈ ಕಾಡಿಗೆ ಪ್ರವೇಶಿಸುತ್ತಿದ್ದಂತೆ ಹಸಿರು ಹೆಮ್ಮರಗಳ ನೆರಳಿನಿಂದಾಗಿ ವಾತಾವರಣ ತಂಪು ಎನಿಸತೊಡಗುತ್ತದೆ. ಜೀರುಂಡೆಗಳ ಮೊರೆತ ಕಿವಿಯನ್ನು ಕೊರೆಯ ತೊಡಗುತ್ತದೆ. ಈ ದಟ್ಟವಾದ ಕಾಡಿನ ನಟ್ಟ ನಡುವೆ ಮಹಾರಾಜರ ಶಿಕಾರಿ ಬಂಗಲೆ, ಬಂಗಲೆಯಿಂದ ಕಾಡಿನೊಳಕ್ಕೆ ನಾನಾ ದಿಕ್ಕುಗಳಲ್ಲಿ ಚಾಚಿಕೊಳ್ಳುವ, ಮಹಾರಾಜರೇ ಮಾಡಿಸಿದ ಗೇಂರೋಡ್‌ಗಳು ಇಂದಿಗೂ ಹಾಗೇ ಇವೆ. ಅರಣ್ಯ ಇಲಾಖೆ ಇವೇ ಗೇಂರೋಡ್‌ಗಳನ್ನು ಅಭಿವೃದ್ಧಿಪಡಿಸಿ ಬಳಸುತ್ತಿದೆ. ಮಸಣಮ್ಮನ ಪ್ರಕಾರ ಮಹಾರಾಜರು ಕೆ. ಗುಡಿ ಕ್ಯಾಂಪ್‌ಗೆಂದು ಬಂದರೆ ನಾಲ್ಕು–ಐದು ದಿನ ಇಲ್ಲೆ ತಂಗುತ್ತಿದ್ದರು, ಜೀಪು ಹತ್ತಿ ಕಾಡಿನಲ್ಲೆಲ್ಲ ಸುತ್ತುತ್ತಿದ್ದರು. ನಾನು ಮಸಣಮ್ಮನನ್ನು ಕೇಳಿದೆ "ಏನು ಮಸಣಮ್ಮ ಗುಡಿಹಟ್ಟಿ ಕಾಡಿನಲ್ಲಿ ಬೇಕಾದಷ್ಟು ಹುಲಿಗಳಿವೆ ಅಂತಾರೆ; ಮಹಾರಾಜರು ಎಷ್ಟು ಹುಲಿ ಹೊಡೆದರು?'' ನನ್ನ ಪ್ರಶ್ನೆ ಆಲಿಸಿದ ಮಸಣಮ್ಮ ಗಾಬರಿಯಿಂದ ಹೇಳಿದಳು "ಚೀಚೀ...